



## ಕೃತಕ ಹಕ್ಕಿ ಗೂಡಲ್ಲಿ ಜೇನ್ನೊಣ



ಕಳೆದ ವರ್ಷ ಕೃತಕ ಪಕ್ಷಿ ಗೂಡೊಂದನ್ನು ಮಾಡಿದ್ದೆ. ಅದನ್ನು ಹುಣಸೆ ಮರವೊಂದರಲ್ಲಿ ಕಟ್ಟಿದ್ದೆ. ಅದನ್ನು ಪಕ್ಷಿಯೊಂದು ಕೆಲ ತಿಂಗಳ ಮಟ್ಟಿಗೆ ತನ್ನ ಆವಾಸವಾಗಿಸಿಕೊಂಡಿತ್ತು. ಸಂತಾನೋತ್ಪತ್ತಿ ಬಳಿಕ ಮರಿಗಳ ಜೊತೆ ಅದು ಜಾಗಬಿಟ್ಟಿತ್ತು. ಗೂಡು ಖಾಲಿ ಖಾಲಿ. ಬಳಿಕ ಈ ಗೂಡಿಗೆ ಬಂದು ಸೇರಿದ್ದು ಜೇನ್ನೊಣಗಳು. ಸಾಮಾನ್ಯವಾಗಿ ತುಡುವೆ ಜೇನು ಪೊದೆಗಳಲ್ಲಿ ತಮ್ಮ ಸಿಹಿ ಸಾಮ್ರಾಜ್ಯ ವಿಸ್ತರಿಸುತ್ತವೆ. ಆದರೆ ನಾನು ನಿರ್ಮಿಸಿದ ಹಕ್ಕಿ ಗೂಡಲ್ಲಿ ಜೇನ್ನೊಣಗಳು ಸಿಹಿಯನ್ನು ಪೇರಿಸಿರುವುದು ನನಗೆ ಆಶ್ಚರ್ಯ ತರಿಸಿತು.

–ಜಿಲಾನ್ ಸಿ., ವಿಜಯನಗರ



## ಗುಬ್ಬಕ್ಕನ ಚಂದಾದ ಸಂಸಾರ!

ಮಾರ್ಚ್ 20 ‘ವಿಶ್ವ ಗುಬ್ಬಚ್ಚಿ ದಿನ’. ಚಪ್ಪಲಿಯ ಕಾಟನ್ ಬಾಕ್ಸ್‌ಗೆ ಪುಟ್ಟ ರಂಧ್ರ ಕೊರೆದು ಸಣ್ಣ ದಾರದಿಂದ ಬಂಧಿಸಿ ಗೋಡೆಯ ಮೊಳೆಗೆ ನೇತುಹಾಕಿದೆ. ಕೆಲವೇ ಗಂಟೆಗಳಲ್ಲಿ ಗುಬ್ಬಕ್ಕನ ಜೋಡಿಗಳು ಪೆಟ್ಟಿಗೆಯನ್ನು ಕೂಲಂಕಷವಾಗಿ ಪರಿಶೀಲಿಸತೊಡಗಿದವು. ಮರುದಿನದಿಂದಲೇ ಆ ಪೆಟ್ಟಿಗೆಗೆ ಹುಲ್ಲಿನ ಎಳೆಗಳು, ಪುಕ್ಕಗಳು, ಹತ್ತಿಯುಂಡೆ, ದಾರ, ಒಣ ಎಲೆಗಳೂ ರವಾನೆಯಾಗತೊಡಗಿದವು. ನೋಡನೋಡುತ್ತಿದ್ದಂತೆ ಪೆಟ್ಟಿಗೆಯೊಳಗೆ ಸಣ್ಣ ಹುಲ್ಲಿನ ಬಣವೆಯೇ ತುಂಬಿಹೋಯಿತು. ಗೂಡಿನ ಕಾಮಗಾರಿ ಮುಗಿದ ತಕ್ಷಣ ಒಂದೆರಡು ದಿನ ಜೋಡಿಗಳ ಸುಳಿವೇ ಇಲ್ಲ. ಬಹುಶಃ ಮಧುಚಂದ್ರಕ್ಕೆ ಹೋಗಿರಬಹುದೇನೋ ಎಂದುಕೊಂಡೆ. ಜೋಡಿಗಳು ಎರಡು ದಿನಗಳ ವಿರಾಮದ ನಂತರ ಗೂಡಿಗೆ ಮರಳಿದವು. ಇಲ್ಲಿಂದ ಸುಮಾರು ಎರಡು ವಾರ ಸರತಿಯಂತೆ ಹೆಣ್ಣು ಗುಬ್ಬಿ ಗೂಡೊಳಗೆ ಮೊಟ್ಟೆಗಳಿಗೆ ಕಾವು ಕೂತರೆ ಗಂಡು ಗುಬ್ಬಿ ಹೊರಗೆ ಕೂತು ಕಾವಲು ಕಾಯುತ್ತಿತ್ತು. ಒಂದು ಮುಂಜಾನೆ ಮೊಟ್ಟೆಗಳು ಒಡೆದು ಮರಿಗಳಾಚೆ ಬಂದವೆಂದು ತೋರುತ್ತದೆ. ಈ ಜೋಡಿಗಳ ಸಂಭ್ರಮ ಹೇಳತೀರದು. ನಿಮಿಷಕ್ಕೆಂಟು ಬಾರಿ ಬಗೆಬಗೆಯ ಹುಳುಗಳು, ಲಾರ್ವಾಗಳನ್ನು ಹಿಡಿದು ತಂದು ಮರಿಗಳಿಗೆ ಉಣಿಸುತ್ತಿದ್ದವು. ದಿನದಿಂದ ದಿನಕ್ಕೆ ಇವುಗಳ ಡಯಟ್ ಪ್ಲಾನ್ ಕೂಡ ಬದಲಾಗುತ್ತಾ ಸಾಗಿ, ಚಪ್ಪಲಿ ಬಾಕ್ಸಲ್ಲಿ ಚಂದಾದ ಸಂಸಾರ ಮೂಡಿತು. ದುಬಾರಿ ಬೆಲೆಯ ಗುಬ್ಬಿಗೂಡುಗಳನ್ನು ಕೊಂಡು ತಂದು ದುಂದು ಮಾಡುವ ಬದಲು ಈ ತೆರನಾಗಿ ಪುಕ್ಕಟೆ ಗೂಡುಗಳನ್ನು ತಯಾರಿಸಿ ಮನೆಗಳಲ್ಲಿ ಕಟ್ಟೋಣ, ಗುಬ್ಬಕ್ಕನ ಸಂತತಿಯನ್ನು ಉಳಿಸೋಣ.

–ಮಹೇಶ್ವರ ಹುರುಕಡ್ಲಿ, ಬಾಚಿಗೊಂಡನಹಳ್ಳಿ

